

ಡಾಕ್ಟ್ರೇ: ಇತ್ತೀಚೆಗೆ ನನಗೆ ಚೆನ್ನಾಗಿ ನಿದ್ದೆಯೇ ಬರುತ್ತಿಲ್ಲ. ಯಾವುದಾದರೂ ಒಳ್ಳೆಯ ಔಷಧಿ ಇದ್ದರೆ ಕೊಡಿ ಎಂದು ಒಬ್ಬ ವ್ಯಕ್ತಿ ಹೇಳಿದ.

'ಒಳ್ಳೆಯ ನಿದ್ದೆ ಬರಬೇಕಾದರೆ ಆಹ್ಲಾದಕರವಾದ ವಾತಾವರಣ, ಮೆತ್ತನೆ ಹಾಸಿಗೆ, ಅದರ ಮೇಲೆ ಶುಭ್ರವಾದ ಬೆಡ್‌ಶೀಟ್, ಎತ್ತರದ ತಲೆದಿಂಬು, ಕಿಟಕಿಗೆ ಹಿತವೆನಿಸುವ ಪರದೆಗಳು, ಮಂದ ಬೆಳಕು ಬೀರುವ ತಿಳಿ ನೀಲಿ ಬಣ್ಣದ ಬಲ್ಬ್, ಸುಗಂಧಭರಿತ ಪರಿಮಳ, ಏರ್‌ಕಂಡಿಷನ್ಡ್ ವ್ಯವಸ್ಥೆ ಇಷ್ಟಿದ್ದರೆ ಸಾಕು. ನಿದ್ರೆ ತಾನಾಗಿಯೇ ಬರುತ್ತದೆ' ಡಾಕ್ಟರ್ ಹೇಳಿದರು.

'ಆದರೆ ಇಷ್ಟೆಲ್ಲ ವ್ಯವಸ್ಥೆಯನ್ನು ಆಫೀಸಿನಲ್ಲಿ ಹೇಗೆ ಮಾಡಿಕೊಳ್ಳಲು ಸಾಧ್ಯ ಡಾಕ್ಟ್ರೇ' ಆ ವ್ಯಕ್ತಿ ಕೇಳಿದ.

★★★

ಪತಿ: ದಶರಥ ಮಹಾರಾಜನ ಹೆಸರು ಕೇಳಿದ್ದೀಯಾ?

ಪತ್ನಿ: ಹೂಂ.

ಪತಿ: ಆತನಿಗೆ ಮೂವರು ಪತ್ನಿಯರಿದ್ದರು.

ಪತ್ನಿ: ಗೊತ್ತು.

ಪತಿ: ಹಾಗಾದರೆ ನಾನು ಇನ್ನೆರಡು ಆಗಬಹುದಲ್ಲ?

ಪತ್ನಿ: ನೀವು ಇಂದ್ರಾಣಿ ಮುಖರ್ಜಿಯ ಹೆಸರು ಕೇಳಿದ್ದೀರಾ?

ಪತಿ: ಅಯ್ಯೋ, ನಾನು ತಮಾಷೆಗಾಗಿ ಹೇಳಿದ್ದನ್ನು ನೀನು ಅಷ್ಟೊಂದು ಸಿರಿಯಸ್ಸಾಗಿ ಏಕೆ ತಗೊತ್ತೀಯಾ?

★★★

ಒಬ್ಬ ಮಹಿಳೆ ಪುರೋಹಿತರ ಬಳಿಗೆ ಹೋಗಿ ಹೇಳಿದಳು. 'ನನ್ನ ಮಗಳಿಗಾಗಿ ಹೋಮ ಮಾಡಿಸಬೇಕಾಗಿದೆ.'

'ಏಕೆ ನಿನ್ನ ಮಗಳಿಗೆ ಮದುವೆಯಾಗುತ್ತಿಲ್ಲವೆ?' ಪುರೋಹಿತರು ಕೇಳಿದರು.



'ಇಲ್ಲ ಗುರುಗಳೇ' ಆಕೆಯ ಫೇಸ್‌ಬುಕ್ಕಿನ ಪಿಕ್ಚರ್ ಪ್ರೊಫೈಲ್‌ಗಳಿಗೆ ಲೈಕ್‌ಗಳು ಬೀಳುತ್ತಿಲ್ಲ'

★★★

ಮಗ: ಅಪ್ಪ, ಏಪ್ರಿಲ್ ಒಂದನ್ನು ಮೂರ್ಖರ ದಿನವನ್ನಾಗಿ ಏಕೆ ಆಚರಿಸುತ್ತಾರೆ?

ತಂದೆ: ಏಕೆಂದರೆ, ಮಾರ್ಚ್ 31 ರವರೆಗೆ ಎಲ್ಲ ಬಗೆಯ ಟ್ಯಾಕ್ಸ್‌ಗಳನ್ನು ಕಟ್ಟಿ ನಮ್ಮ ಜೇಬುಗಳನ್ನು ಖಾಲಿ ಮಾಡಿಕೊಂಡಿರುತ್ತೇವೆ. ಏಪ್ರಿಲ್ ಒಂದರಿಂದ ಪುನಃ ನಾವು ಸರ್ಕಾರಕ್ಕಾಗಿ ಕೆಲಸ ಮಾಡಲು ಆರಂಭಿಸುತ್ತೇವೆ.

★★★

ಪತಿ: ಇಂದು ನನ್ನ ಜೀವನದಲ್ಲಿ ತುಂಬ ಆನಂದದಾಯಕವಾದ ದಿನ.

ಪತ್ನಿ: ಆದರೆ ನಮ್ಮ ಮದುವೆ ವಾರ್ಷಿಕೋತ್ಸವ ಇರುವುದು ನಾಳೆಯಲ್ಲವೆ?

ಪತಿ: ಅದಕ್ಕೆ ಹೇಳಿದ್ದು. ಇಂದು ನನ್ನ ಜೀವನದಲ್ಲಿ ತುಂಬ ಆನಂದದಾಯಕವಾದ ದಿನ ಎಂದು.

★★★

ಶಿಕ್ಷಕ: ನಿನಗೆ ನಾಯಿಯ ಮೇಲೆ ನಿಬಂಧ ಬರೆದುಕೊಂಡು ಬರಲು ಹೇಳಿದರೆ ನೀನು ನಾಣಿ ಬರೆದುದ್ದನ್ನು ಕಾಪಿ ಮಾಡಿರುವೆಯಲ್ಲ.

ವಿದ್ಯಾರ್ಥಿ: ಇಲ್ಲ ಮೇಡಂ. ನಾನು ಅವನು ಬರೆದುದನ್ನು ಕಾಪಿ ಮಾಡಿಲ್ಲ. ವಿಷಯವೇನೆಂದರೆ ನಮ್ಮ ಇಡೀ ಕಾಲನಿಯಲ್ಲಿ ಒಂದೇ ನಾಯಿ ಇದೆ.

★★★

ಒಬ್ಬ ವ್ಯಾಪಾರಿಗೆ ಅವನು ಮಾಡಿದ ಒಂದು ಕೊಲೆಗಾಗಿ ಮರಣದಂಡನೆ ಶಿಕ್ಷೆಯಾಯಿತು. ನ್ಯಾಯಾಧೀಶರು ತೀರ್ಪನ್ನು ಓದುತ್ತ ವ್ಯಾಪಾರಿಗೆ ಹೇಳಿದರು. 'ನಿನ್ನ ಅಪರಾಧ ಸಾಬೀತಾಗಿ ನಿನಗೆ ಮರಣದಂಡನೆ ಶಿಕ್ಷೆಯಾಗಿದೆ, ನಾಳೆ ನಿನಗೆ ಗಲ್ಲಿಗೆ ಏರಿಸಲಾಗುವುದು'

ವ್ಯಾಪಾರಿ ಕೇಳಿದ: ಗಲ್ಲಿಗೆ ಏರಿಸಿದ ನಂತರ ಕೆಳಗೆ ಯಾವಾಗ ಇಳಿಸುವಿರಿ? ನನಗೆ ಅಂಗಡಿ ತೆರೆಯಬೇಕಾಗಿದೆ.

★★★

ಗುಂಡನಿಗೆ ಒಂದು ಅನಾಥ ಮಂಗನ ಮರಿ ದೊರೆಯಿತು. ಅದನ್ನು ತೆಗೆದುಕೊಂಡು ಅವನು ಪೊಲೀಸ್ ಠಾಣೆಗೆ ಹೋದ. ಅದನ್ನು ಪ್ರಾಣಿ ಸಂಗ್ರಹಾಲಯಕ್ಕೆ ತೆಗೆದುಕೊಂಡು ಹೋಗುವಂತೆ ಇನ್‌ಸ್ಪೆಕ್ಟರ್ ಅವನಿಗೆ ಹೇಳಿದರು.

ಮರುದಿನ ಆ ಮಂಗನ ಮರಿಯೊಂದಿಗೆ ಸಿಟಿ ಬಸ್‌ಸ್ಟಾಪಿನಲ್ಲಿ ನಿಂತಿರುವುದನ್ನು ಇನ್‌ಸ್ಪೆಕ್ಟರ್ ನೋಡಿದರು.

'ಮಂಗನನ್ನು ಪ್ರಾಣಿ ಸಂಗ್ರಹಾಲಯಕ್ಕೆ ತೆಗೆದುಕೊಂಡು ಹೋಗಲಿಲ್ಲವೆ?' ಇನ್‌ಸ್ಪೆಕ್ಟರ್ ಕೇಳಿದರು.

'ತೆಗೆದುಕೊಂಡು ಹೋಗಿದ್ದೆ. ತುಂಬ ಮೋಜು ಮಾಡಿದೆವು. ಇಂದು ಅದನ್ನು ಸ್ನೋವರ್ಲ್ಡ್‌ಗೆ ಕರೆದುಕೊಂಡು ಹೋಗುತ್ತಿದ್ದೇನೆ' ಗುಂಡನೆಂದ!

(ಸಂಗ್ರಹ) ಮುರಲೀಧರ ಕುಲಕರ್ಣಿ, ಬೀದರ್


